# ಶತ್ರುವಿನಲ್ಲಿ ಇಟ್ಟ ನಂಬಿಕೆ!

ಇದು ರಾಮಾಯಣದ ಸಂದರ್ಭ. ಹದಿನಾಲ್ಕು ವರ್ಷಗಳಷ್ಟು ದೀರ್ಘಕಾಲ ತಾನು ಕಾಡಾಡಿಯಾಗಿರಬೇಕೆಂಬ ಮಾತಿಗೆ– ಯಾವಜ್ಜೀವ ಕಾಡಾಡಿಯಾಗಿರಬೇಕೆಂಬುದೇ ಈ ಮಾತಿನ ಒಳ ಅರ್ಥ ರಾಮನು ಒಪ್ಪಿ ಆ ನಿಲುವಿಗೆ ತಾನು ದೃಢವಾಗಿ ಅಂಟಿಕೊಳ್ಳದೆ ಇರುತ್ತಿದ್ದರೆ ಅದು ಸಕಲರಿಗೂ ಪ್ರಿಯವಾಗುತ್ತಿತ್ತು! ಅಯೋಧ್ಯೆಯ ಪ್ರಜೆಗಳೆಲ್ಲ ಗದ್ದುಗೆಯಲ್ಲಿ ರಾಮನನ್ನೇ ಬಯಸುತ್ತಿದ್ದರು. ಹಾಗೆಂದು ಅತ್ಯುತ್ಸಾಹದಿಂದ ದಶರಥನಲ್ಲಿ ಹೇಳಿ ಸಂಭ್ರಮಿಸಿದ್ದರು. ಈಗ ರಾಮನು ಕಾಡಿಗೆ ತೆರಳುವ ಸಂದರ್ಭದ ಕುರಿತಾಗಿ ವದಂತಿಗಳು ಹರಡುತ್ತಿದ್ದಂತೆ ಪ್ರಜೆಗಳೆಲ್ಲ ತೀವ್ರ ಆತಂಕಕ್ಕೆ ಒಳಗಾಗಿದ್ದರು. ಅಲ್ಲಲ್ಲಿ ಗುಂಪುಗೂಡುತ್ತ, ಕಾಡಿಗೆ ಹೋಗದಂತೆ ರಾಮನನ್ನು ತಡೆಯುವುದೆಂದು ಅಥವಾ ರಾಮನ ಹಿಂದೆ ತಾವೂ ಕಾಡಿಗೆ ನಡೆಯುವುದೆಂದು ಗೊಂದಲಗೊಂಡು ಚರ್ಚಿಸುತ್ತಿದ್ದರು. ಪ್ರಜೆಗಳಿಂದ ತಪ್ಪಿಸಿಕೊಂಡು ಹೋಗುವುದು ಹೇಗೆ ಎಂದು ರಾಮನಿಗೆ ಚಿಂತೆಯಾಗುತ್ತಿತ್ತು. ಸಿಂಹಾಸನವನ್ನೇರಬೇಕೆಂದು ಹೃತ್ಪೂರ್ವಕವಾಗಿ ಒತ್ತಾಯಿಸುತ್ತಿದ್ದ ಪ್ರಜೆಗಳಿಂದ ಪಾರಾಗುವ ಉಪಾಯವನ್ನು ಚಿಂತಿಸುತ್ತಿದ್ದ ಮೊತ್ತ ಮೊದಲ ರಾಜಕುಮಾರನಿರಬೇಕು ರಾಮ! ಇಂಥದೊಂದು ಸಂದರ್ಭವನ್ನು ಚಿತ್ರಿಸಿದ ಮೊತ್ತ ಮೊದಲ ಕವಿ ಇರಬೇಕು ವಾಲ್ಮೀಕಿ!

ಪ್ರಜೆಗಳು ಹೀಗಾದರೆ, ಲಕ್ಷ್ಮಣ ಇದನ್ನೆಲ್ಲ ನೋಡಿ ಕನಲಿ ಹೋಗಿದ್ದ. ರಾಮನಿಗೆ ಅನ್ಯಾಯವಾಗುತ್ತಿದೆ; ಈ ಅನ್ಯಾಯವನ್ನು ಸರಿಪಡಿಸುವುದು ತನ್ನ ಕರ್ತವ್ಯ ಎಂದುಕೊಂಡಿದ್ದ. ಬೇಕಿದ್ದರೆ, ಮುದುಕನೂ, ವಿಷಯಲಂಪಟನೂ ಆದ ತಂದೆ ದಶರಥನನ್ನು ಕೊಂದಾದರೂ ರಾಮನನ್ನು ರಾಜನನ್ನಾಗಿಸುವೆ ಎಂಬಷ್ಟು ದೂರದ ಮಾತುಗಳನ್ನಾಡಿದ್ದ. ಲಕ್ಷ್ಮಣನದು ಉದ್ವೇಗದ ಮಾತುಗಳಾದರೂ, ಕ್ಷತ್ರಿಯರ ಅಧಿಕಾರದ ರಾಜಕೀಯದಲ್ಲಿ ತಂದೆಯನ್ನು ಕೊಂದು ಸಿಂಹಾಸನವನ್ನೇರುವ ಸಂದರ್ಭಗಳು ನಡೆದಿದ್ದರೆ ಆಶ್ಚರ್ಯವೇನೂ ಇಲ್ಲ. ಅಷ್ಟೇಕೆ? ತನ್ನನ್ನು ಕೊಂದು ಗದ್ದುಗೆಯನ್ನೇರು ಎನ್ನುವ ಮಾತನ್ನು ಸ್ವಯಂ ದಶರಥನೇ ರಾಮನಿಗೆ ಹೇಳುತ್ತಾನೆ! ಉದ್ವಿಗ್ನವಾದ ಮಾತು; ದಶರಥನ ಅವಸ್ಥೆಯನ್ನು ಸೂಚಿಸುವ ಮಾತು ಹೌದಾದರೂ ತಂದೆಯನ್ನು ಮೀರಿ ಅಧಿಕಾರ ಕೈಗೂಡಿಸಿಕೊಳ್ಳುವುದು ಹೊಸತೇನಲ್ಲ ಎನ್ನುವ ಅರ್ಥವನ್ನು ಈ ಮಾತು ಹೇಳುತ್ತದೆ. ಲಕ್ಷ್ಮಣನ ಮಾತುಗಳು ದಶರಥನಿಗೆ ವರದಿಯಾಗುತ್ತಿದ್ದರೆ ರಾಮನನ್ನು ಅಯೋಧ್ಯೆಯಲ್ಲಿ ಉಳಿಸಿಕೊಳ್ಳುವಲ್ಲಿ ಆಶಾಕಿರಣವೊಂದು ಮುಪ್ಪಿನ ದೊರೆಗೆ ತೋರಿಬರುತ್ತಿತ್ತು!

ಮಂತ್ರಿಗಳೆಲ್ಲರೂ ದಶರಥನಿಗೆ ಪರವಾಗಿದ್ದರು. ಕೈಕೆಯಿಪರ ಯಾರೂ ಇರಲಿಲ್ಲ. ಜಾಬಾಲಿ ಎಂಬ ನಾಸ್ತಿಕ ವಿಚಾರವಂತ ಇವನು ದಶರಥನ ಮಂತ್ರಿ ಸಂಪುಟದಲ್ಲಿ ಓರ್ವ ಸದಸ್ಯ– ಈ ಬಗೆಯ ಭಾವುಕತೆಯನ್ನೇ ಒಪ್ಪದೆ, ಆ ಮೇಲೆ ಚಿತ್ರಕೂಟದಲ್ಲಿ, ಭರತ ರಾಮರ ಸಂವಾದದ ವೇಳೆ, ಭರತನ ಪರವಾಗಿ ಮಾತೆತ್ತುತ್ತಾನೆ. ಮೊದಲ ನಾಸ್ತಿಕಭಾಷಣ ಆದಿಕಾವ್ಯದಲ್ಲಿ ಉಲ್ಲೇಖಗೊಂಡಿದೆ! ಅದು ಮನುಷ್ಯ ಸಂಬಂಧಗಳಲ್ಲಿ ಕಂಡು ಬರುವ ಅತಿಭಾವುಕತೆಯನ್ನು ಒಪ್ಪದ ಭಾಷಣ. ಅದು ಭರತನ ಪರವಾದ ಭಾಷಣ. ಇದು ಮಹತ್ವದ್ದು.

ಅಷ್ಟೇಕೆ; ಸ್ವಯಂ ನಿರ್ವಿಕಾರರಾದ ವಸಿಷ್ಠ ಮುನಿ, ಸೀತೆಗೆ ನಾರುಮಡಿ ಉಡಿಸುವ ಸಂದರ್ಭದಲ್ಲಿ ಉದ್ವೇಗಕ್ಕೆ ಒಳಗಾದರು. ಕ್ರೌಂಚದ ಅಳಲನ್ನು ಕೇಳಿ ಉದ್ವಿಗ್ನನಾದ ವಾಲ್ಮೀಕಿಯಂತೆ! ವಸಿಷ್ಠರು, ಸೀತೆಗೆ ವನವಾಸ ಕರ್ತವ್ಯವಲ್ಲ ಎಂದರು. ಏಕೆ ಕರ್ತವ್ಯವಲ್ಲ? ಗಂಡನ ಜತೆ ನಡೆಯುವುದು ಹೆಂಡತಿಗೆ ಕರ್ತವ್ಯವಲ್ಲವೆ? ಅದೇನೋ ನಿಜ. ಆದರೆ ಸೀತೆಗೆ ಅದಕ್ಕಿಂತಲೂ ಮುಖ್ಯವಾದ ಇನ್ನೊಂದು ಕರ್ತವ್ಯವಿದೆ. ರಾಮನು ಸಿಂಹಾಸನವನ್ನು ತೊರೆದು ಕಾಡಿಗೆ ಹೋಗುವುದೇ ನಿಜವಾದರೆ, ಆ ಸಿಂಹಾಸನವನ್ನು ಸೀತೆ ಏರಬೇಕು! ಅದು ಸೀತೆಯ ಹಕ್ಕು. ಸೀತೆಯ ಕರ್ತವ್ಯ. ಈ ಕರ್ತವ್ಯವನ್ನು ಪಾಲಿಸುವುದಕ್ಕಾಗಿ ರಾಮನ ಒಪ್ಪಿಗೆ ಪಡೆದು ಸೀತೆ ವನಗಮನ ಮಾಡಬೇಕಿಲ್ಲ!

ಸಿಂಹಾಸನವನ್ನು ಸೀತೆ ಏರಬೇಕೆಂಬ ಮಾತು ಕ್ರಾಂತಿಕಾರಕವಾದದ್ದು. ಆದರೆ ವಸಿಷ್ಠರು ಮರೆತೇ ಬಿಟ್ಟಿದ್ದಾರೆ. ಕೈಕೆ ಕೇಳಿದ ವರದಲ್ಲಿ ರಾಮ ಕಾಡಿಗೆ ನಡೆಯಲಿ ಎಂದಂತೆಯೇ ಸಿಂಹಾಸನವನ್ನು ಭರತ ಏರಲಿ ಎಂಬ ಮಾತೂ ಇದೆ ಎಂಬುದನ್ನು! ಅದಿರಲಿ. ಅದು ಉದ್ವೇಗ. ಮುಖ್ಯವಾದ ಮಾತೇನೆಂದರೆ ಧರ್ಮಜ್ಞರಾದ ವಸಿಷ್ಠರೂ ಕೈಕೆಯ ಪರ ಇರಲಿಲ್ಲ.

ಕೈಕೆಯ ಪರ ಇದ್ದವನು ರಾಮನೊಬ್ಬನೇ! ಈ ಅರ್ಥದಲ್ಲಿ ಕೈಕೆಯ ಆಶಾಕಿರಣ ರಾಮನೊಬ್ಬನೇ. ರಾಮನು ಸತ್ಯನಿಷ್ಠನೆನ್ನುವ ನಂಬಿಕೆ, ಏನೇ ಆದರೂ ತಾನು ಸತ್ಯವೆಂದು ತಿಳಿದುದನ್ನು ಬಿಟ್ಟು ರಾಮನು ನಡೆಯಲಾರನೆಂಬ ನಂಬಿಕೆ ಕೈಕೆಗೆ ಇತ್ತು. ಮಂಥರೆಗೆ ಇತ್ತು. ಈ ನಂಬಿಕೆಯಿಂದಾಗಿಯೇ ಅವರು ಸಂಚು ಹೂಡಿದ್ದು ಕೂಡಾ! ರಾಮನನ್ನು ಶತ್ರುಸ್ಥಾನದಲ್ಲಿಟ್ಟು ನೋಡಿದರೂ ತನ್ನ ಶತ್ರುವಿನ ವ್ಯಕ್ತಿತ್ವ, ಉಳಿದೆಲ್ಲರಿಗಿಂತ ಹೆಚ್ಚಾಗಿ ಕೈಕೆಗೆ ತಿಳಿದಿತ್ತು!

ದುಃಖವಿಹ್ವಲನಾದರೂ, ದಶರಥ ಆಳದಲ್ಲಿ ರಾಮನನ್ನು ಮೆಚ್ಚಿಕೊಳ್ಳುವುದು ಅನಿವಾರ್ಯವಿತ್ತು. ತಾನು ಶತ್ರುವೆಂದು ಬಗೆದರೂ, ತನ್ನ ಸ್ವಾರ್ಥವನ್ನು ಉಪಾಯದಿಂದ ಸಾಧಿಸಿಕೊಂಡರೂ, ಕೈಕೆಯೂ ರಾಮನನ್ನು ಮೆಚ್ಚಿಕೊಳ್ಳುವುದು ಅನಿವಾರ್ಯವಿತ್ತು. ಇದೇ ಮನಕಲಕುವ ಸಂಗತಿ!

■ ತೋಷ

## ಮಾತೇ ಮುತ್ತು

★ ನಾನು ನಿಮಗೆ ಹಿಂಸೆಯನ್ನು ಬೋಧಿಸುವುದಿಲ್ಲ, ಯಾಕೆಂದರೆ ನನಗೆ ಅದರಲ್ಲಿ ನಂಬಿಕೆಯಿಲ್ಲ. ಆದರೆ ಪ್ರಾಣ ಹೋದರೂ ಪರವಾಗಿಲ್ಲ, ಇನ್ನೊಬ್ಬರ ಮುಂದೆ ತಲೆ ಬಗ್ಗಿಸಬೇಡಿ ಎಂದು ಬೋಧಿಸಬಲ್ಲೆ.

–ಮಹಾತ್ಮ ಗಾಂಧೀಜಿ

★ ದೇಶಗಳು ಕವಿಗಳ ಹೃದಯದಲ್ಲಿ ಹುಟ್ಟುತ್ತವೆ. ಆದರೆ ರಾಜಕಾರಣಿಗಳ ಕೈಯಲ್ಲಿ ಅರಳುತ್ತವೆ ಮತ್ತು ಸಾಯುತ್ತವೆ.

–ರಾಷ್ಟ್ರಕವಿ ಇಕ್ಬಾಲ್

★ ಕನ್ನಡಿಯೊಂದು ನಿಮ್ಮನ್ನು ದುಃಖಿತರನ್ನಾಗಿ ಮಾಡಿದರೆ, ಅದಕ್ಕೆ ನಿಮ್ಮ ಬಗ್ಗೆ ಗೊತ್ತಿಲ್ಲ ಎಂದೇ ಅರ್ಥ.

–ಸಂತ ಕಬೀರ

★ ಸಂತೋಷ ಎನ್ನುವುದು ನಿಮ್ಮ ಪ್ರಕೃತಿ. ಅದನ್ನು ಬಯಸುವುದು ತಪ್ಪು. ಅದು ನಿಮ್ಮೊಳಗೇ ಇರುವಾಗ ಹೊರಗೇಕೆ ಹುಡುಕುತ್ತೀರಿ?

–ರಮಣ ಮಹರ್ಷಿ

★ ನಿನ್ನೆ ನಾನು ಚಾಣಾಕ್ಷನಾಗಿದ್ದೆ, ಅದಕ್ಕೆಂದೇ ಜಗತ್ತನ್ನು ಬದಲಾಯಿಸಲು ಹೊರಟೆ. ಇವತ್ತು ನಾನು ಬುದ್ಧಿವಂತನಾಗಿದ್ದೇನೆ. ಅದಕ್ಕೆಂದೇ ನನ್ನನ್ನು ನಾನು ಬದಲಾಯಿಸಲು ಹೊರಟಿದ್ದೇನೆ.

–ರೂಮಿ

★ ದುಃಖವನ್ನು ಧ್ಯಾನದ ದಾರಿಯನ್ನಾಗಿ ಮಾಡಿಕೊಳ್ಳಿ. ದುಃಖಕ್ಕೆ ಸಾಕ್ಷಿಯಾಗಿ, ಅದು ನಿಮ್ಮ ಸ್ನೇಹಿತ. ಅದು ನಿಮ್ಮ ಸ್ವರ್ಗೀಯ ಏಕಾಂತಕ್ಕೆ ಬಾಗಿಲು ತೆರೆಯುತ್ತದೆ.

–ಓಶೋ ರಜನೀಶ್

★ ಕಲೆ ಮತ್ತು ಕರಕುಶಲತೆಯನ್ನು ಕಲಿಸುವ ವಿಜ್ಞಾನ ಉಪಜೀವನಕ್ಕೆ ದಾರಿ ಮಾಡಿಕೊಡಬಹುದು. ಆದರೆ ಭೌತಿಕ ಅಸ್ತಿತ್ವದಿಂದ ನಿರ್ಗಮನವನ್ನು ಕಲಿಸಿಕೊಡುವ ವಿಜ್ಞಾನ ನೈಜವಾದದ್ದು.

–ನಾಗಾರ್ಜುನ

★ ಬೇರೆಯವರ ಆಲೋಚನೆಗಳನ್ನು ಒಪ್ಪಿಕೊಳ್ಳದಿದ್ದರೂ ತಾಳ್ಮೆಯಿಂದ ಆಲಿಸುವುದು, ಸುಶಿಕ್ಷಿತ ಮನಸ್ಸಿನ ಸಂಕೇತ.

–ಅರಿಸ್ಟಾಟಲ್

★ ಶಬ್ದಗಳು ಸತ್ಯವೂ, ಸಹಾನುಭೂತಿಪರವೂ ಆಗಿದ್ದಾಗ ಜಗತ್ತನ್ನು ಬದಲಾಯಿಸಬಹುದು.

–ಗೌತಮ ಬುದ್ಧ

★ ಅತಿ ಕಡಿಮೆ ವಸ್ತುಗಳೊಂದಿಗೆ ಜೀವಿಸುವವನೇ ಅತಿದೊಡ್ಡ ಶ್ರೀಮಂತ.

–ಪ್ಲೇಟೋ

★ ನಮ್ಮ ಒಳ್ಳೆಯ ಕೆಲಸಗಳಿಗಿಂತ ನಾವು ಮಾಡಿದ ಅಪರಾಧಗಳೇ ಹೆಚ್ಚು ಕಾಲ ನೆನಪಿನಲ್ಲಿ ಉಳಿಯುತ್ತವೆ.

–ಡೆಮಾಕ್ರಿಟಸ್

★ ದೇವರು ಒಬ್ಬನೇ. ಅವನನ್ನು ಭಾವಿಸುವ ಮನಸ್ಸುಗಳು ಮಾತ್ರ ಅನೇಕ.

–ಉಪನಿಷತ್